# ಕಾರ್ಮಿಕ ನ್ಯಾಯಾಲಯ, ಮೈಸೂರು.

**Ref**: 29/2021

ಎಂ. ಡಬ್ಲ್ಯೂ-1

**ದಿನಾಂಕ 25.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ ಎಲ್.ಎಂ.ಪಿ. ವಕೀಲರಿಂದಃ**

ದಿನಾಂಕ 10.08.2018 ರಂದು 1 ನೇ ಪಕ್ಷಗಾರರ ಯೂನಿಯನ್‌ರವರು ವಿಕೃತ ಮಾಲಾ ಗ್ರಾಮದಲ್ಲಿದ್ದ ಕಾರ್ಖಾನೆಗೆ ನಿಯೋಜನೆ ಮೇರೆಗೆ ಮತ್ತು ಆಕ್ಷೇಪಣೆಯೊಂದಿಗೆ ದಿನಾಂಕ 08.08.2018 ರಂದು ಉಪ ಕಾರ್ಮಿಕ ಆಯುಕ್ತರಿಗೆ ಲಿಖಿತವಾಗಿ ವರದಿ ನೀಡಿ ತದನಂತರ ವರದಿ ಮಾಡಿಕೊಂಡಿರುತ್ತಾರೆ ಇದರ ಬಗ್ಗೆ ನಿಮಗೆ ಅರಿವು ಇರುತ್ತದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಿ.ಎಂ.412 ರ ದಾಖಲೆಯನ್ನು ನಾನೇ ನೀಡಿದ್ದು ಅದರಲ್ಲಿರುವ ವಿಚಾರಗಳು ನನಗೆ ತಿಳಿದಿರುತ್ತದೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

ದಿನಾಂಕ 06.10.2018 ರವರೆಗೂ ನಮಗೆ ಕೆಲಸವನ್ನು ನೀಡದಿದ್ದರೆ ನಾವು ದಿನಾಂಕ 08.10.2018 ರಂದು ಮೈಸೂರಿನ ಕಾರ್ಖಾನೆಗೆ ವರದಿ ಮಾಡಿಕೊಳ್ಳುತ್ತೇವೆ ಎಂದು ಬರವಣಿಗೆಯಲ್ಲಿ ಪತ್ರವನ್ನು ನೀಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಿ.ಎಂ.484 ರ ದಾಖಲೆ ಪ್ರಕಾರ ನನಗೆ 1 ನೇ ಪಕ್ಷಗಾರರು ಪತ್ರವನ್ನು ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಉಪ ಕಾರ್ಮಿಕ ಆಯುಕ್ತರ ಕಚೇರಿಯಿಂದ ನನಗೆ ಸದರಿ ದಾಖಲೆಯನ್ನು ನೀಡಿದ್ದು ಅದನ್ನು ನಾನು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನನಗೆ ಆ ರೀತಿ ಮಾಹಿತಿ ಬಂದಿದ್ದರೂ ಕೂಡ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಎಂ.432 ರ ಪ್ರಕಾರ ಕಾರ್ಮಿಕರಿಗೆ ತರಬೇತಿ ಷಡ್ಯೂಲ್‌ನ್ನು ನಿಗದಿ ಮಾಡಿದ್ದೆವು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಆ ರೀತಿ ಯಾವುದೇ ತರಬೇತಿಯನ್ನು ನಾವು ಕಾರ್ಮಿಕರಿಗೆ ನೀಡಿಲ್ಲ, ನ್ಯಾಯಾಲಯವನ್ನು ತಪ್ಪು ದಾರಿಗೆ ಎಳೆಯಲು ಸುಳ್ಳು ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಎಂ.433 ರ ಪ್ರಕಾರ 20.08.2018 ರಿಂದ 02.09.2018 ರವರೆಗೂ ವೇತನ ಸಹಿತ ರಜೆ ನೀಡಿರುತ್ತೇವೆ ಎಂದರೆ ಸಾಕ್ಷಿ ಕಾರ್ಮಿಕರ ಒಂದು ಮನವಿ ಮೇರೆಗೆ ನಾವು ಅವರಿಗೆ ವೇತನ ಸಹಿತ ರಜೆ ನೀಡಿರುತ್ತೇವೆ ಎಂದು ಹೇಳಿರುತ್ತಾರೆ. ನಿ.ಎಂ.436 ರ ಪ್ರಕಾರ ನಾವು ಕಾರ್ಮಿಕರಿಗೆ ನೊಟೀಸನ್ನು ಕೊಟ್ಟಿಲ್ಲ, ಸದರಿ ವಿಚಾರವನ್ನು ಎಲ್ಲೂ ಸಹ ಉಲ್ಲೇಖ ಮಾಡಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಮುಂದುವರೆದು ನೊಟೀಸ್ ಬೋರ್ಡ್‌ನಲ್ಲಿ ಸದರಿ ನೊಟೀಸನ್ನು ಲಗತ್ತಿಸಲಾಗಿತ್ತು ಎಂದು ಹೇಳಿರುತ್ತಾರೆ. ನಿ.ಎಂ.436 ರ ಪ್ರಕಾರ ನೊಟೀಸನ್ನು ಯಾರನ್ನು ಉದ್ದೇಶಿಸಿ ಬರೆದಿರುತ್ತೀರಿ ಎಂದರೆ ಸಾಕ್ಷಿ ತಿರುಪತಿ ಘಟಕದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರನ್ನು ಉದ್ದೇಶಿಸಿ ಬರೆದಿರುತ್ತೇವೆ ಎಂದು ಹೇಳಿರುತ್ತಾರೆ. ಕಾರ್ಮಿಕರು ಮೈಸೂರಿನಿಂದ ಬೆಂಗಳೂರಿಗೆ ಕಾಲ್ನಡಿಗೆ ಜಾಥಾ ಮಾಡಿದ ಸಂದರ್ಭದಲ್ಲಿ ನಾವು ನಿ.ಎಂ.436 ರ ಪ್ರಕಾರ ಅವರಿಗೆ ನೊಟೀಸನ್ನು ನೀಡಿದ್ದೆವು, ನನಗೆ ಆ ವಿಷಯ ಗೊತ್ತಿತ್ತು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸಿರುತ್ತಾರೆ. ನಿ.ಎಂ.450 ರ ದಾಖಲೆಯನ್ನು ಕಾರ್ಮಿಕರಿಗೆ ನೀಡಿರುವುದರ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ ಎಂದರೆ ಅದರ ಅವಶ್ಯಕತೆ ಇಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ದಾಖಲೆಯ ಪ್ರಕಾರ ನಾವು ಯಾವುದೇ ನೊಟೀಸನ್ನು ನಾವು ಯಾರಿಗೂ ನೀಡಿಲ್ಲ, ಅದನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಿ.ಎಂ.538 ರ ಪ್ಯಾರಾ ನಂ.15 ರ ಪ್ರಕಾರ ದಿನಾಂಕ 10.09.2018 ರಂದು ಯಾವುದೇ Suspension of Factory Operation ಪ್ರಕ್ರಿಯೆ ಆಗಿಲ್ಲ ಎಂದರೆ ಸಾಕ್ಷಿ

ಅದು ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ದಿನಾಂಕ 07.01.2019 ರಂದು ನಡೆದಿದ್ದ ಸಂಧಾನ ನಡಾವಳಿಯನ್ನು ನಾನು ಓದಿರುತ್ತೇನೆ. ಆ ಸಂಧಾನ ಸಭೆಯಲ್ಲಿ ಆದ ಷರತ್ತುಗಳನ್ನು ಕಾರ್ಮಿಕರು ಉಲ್ಲಂಘನೆ ಮಾಡಿರುತ್ತಾರೆ ಎಂದು ದೂರು ನೀಡಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ಉಪ ಕಾರ್ಮಿಕ ಆಯುಕ್ತರು, ತಿರುಪತಿರವರ ಮುಂದೆ ದಿನಾಂಕ 16.08.2019 ರಂದು ಸಲ್ಲಿಸಿರುವ ಆಕ್ಷೇಪಣೆ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಅದು ಉಪ ಕಾರ್ಮಿಕ ಆಯುಕ್ತರು, ತಿರುಪತಿರವರು ನೀಡಿದ್ದ ನೊಟೀಸ್‌ಗೆ ಆಕ್ಷೇಪಣೆಯನ್ನು ಬರೆದುಕೊಡಿ ಎಂದು ನನಗೆ ತಿಳಿಸಿದ್ದರು, ಅದಕ್ಕೆ ಸಂಬಂಧಪಟ್ಟಂತೆ ಆಗಿರುವ ದಾಖಲೆ ಇದಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿ.ಎಂ.554 ಎಂದು ಗುರುತಿಸಲಾಯಿತು.

ನಿ.ಎಂ.554 ರಂತೆ ಆಕ್ಷೇಪಣೆಯನ್ನು ಸಲ್ಲಿಸುವುದಕ್ಕಿಂತ ಮುಂಚೆ ಅಂದರೆ ದಿನಾಂಕ 06.06.2019 ರಂದು ಅದನ್ನು ಹಿಂಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಅದೇ ರೀತಿ Ref.36/2019 ಔದ್ಯಮಿಕ ನಾಯಾಲಯದ ಮುಂದೆ ಬಾಕಿ ಇದ್ದ ಪ್ರಕರಣವನ್ನು ದಿನಾಂಕ 31.05.2019 ರ ಆದೇಶದ ಪ್ರಕಾರ ಅದನ್ನು ಹಿಂಪಡೆಯಲಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಿನಾಂಕ 07.01.2019 ರ ಒಡಂಬಡಿಕೆ ಪ್ರಕಾರ ಮಹಿಳಾ ಕಾರ್ಮಿಕರ ವರ್ಗಾವಣೆಯನ್ನು ರದ್ದುಗೊಳಿಸಿ ಮೈಸೂರು ಘಟಕದಲ್ಲಿ ಅವರಿಗೆ ಕೆಲಸ ಕೊಟ್ಟಿದ್ದೆವು ಎಂದರೆ ಸಾಕ್ಷಿ, ಕಾರ್ಮಿಕರು ನೀಡಿದ್ದ ಮನವಿ ಪತ್ರದ ಪ್ರಕಾರ ಅವರನ್ನು ವರ್ಗಾವಣೆ ಮಾಡಿದ್ದೆವು ಎಂದು ಹೇಳಿರುತ್ತಾರೆ. ಕಾರ್ಮಿಕ ಇಲಾಖೆಯ ಆಯುಕ್ತರು ಸದರಿ ದಾಖಲೆಗೆ ಸಂಬಂಧಪಟ್ಟಂತೆ ಸ್ಟೇಟಸ್ ವರದಿ ಕೊಡಲು ಕೋರಿದ್ದು ಆ ಪ್ರಕಾರ ನಾವು ಸದರಿ ದಾಖಲೆಯನ್ನು ನೀಡಿರುತ್ತೇವೆ ಎಂದರೆ ಸಾಕ್ಷಿ ಸದರಿ ದಾಖಲೆಗಳ ಜೊತೆ ದೂರು

ದಾಖಲೆಯನ್ನು ಸೇರಿಸಿ ಕೊಟ್ಟಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ಸ್ಟೇಟಸ್ ವರದಿಯನ್ನು ನಿ.ಎಂ.555 ಎಂದು ಗುರುತಿಸಲಾಯಿತು.

ದಿನಾಂಕ 21.11.2019 ರಂದು ಉಪ ಕಾರ್ಮಿಕ ಆಯುಕ್ತರಿಗೆ ಬರೆದಿದ್ದ ಪತ್ರದಲ್ಲಿ ದಿನಾಂಕ 10.10.2018 ರ ಪ್ರಕರಣವನ್ನು ಮುಕ್ತಾಯ ಮಾಡಲು ಕೇಳಿದ್ದು ನಾವು ಆ ಪ್ರಕಾರ ಪ್ರಕರಣವನ್ನು ಮುಕ್ತಾಯ ಮಾಡಿದ್ದೆವು ಎಂದರೆ ಸಾಕ್ಷಿ ಸಂಧಾನದ ಸಭೆಗಳನ್ನು ಮುಕ್ತಾಯ ಗೊಳಿಸಲು ಕೋರಿದ್ದರ ಬಗ್ಗೆ ನೀಡಿರುವ ದಾಖಲೆ ಎಂದು ಉತ್ತರಿಸಿರುತ್ತಾರೆ. ಸದರಿ ಸಂಧಾನ ಸಭೆ ಮುಕ್ತಾಯಗೊಳಿಸುವ ಬಗ್ಗೆ ಇನ್ನೊಂದು ದಾಖಲೆಯನ್ನು ಸಹ ನಾವು ಬರೆದಿದ್ದೆವು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿ ಅದರ ಜೊತೆಗೆ ನಾವು ಸರ್ಕಾರದ ನಡಾವಳಿ ಸಹ ಅಡಕವಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ಮನವಿಯನ್ನು ನಿ.ಎಂ.556 ಎಂದು ಹಾಗೂ ದಾಖಲೆಯನ್ನು ನಿ.ಎಂ.557 ಎಂದು ಸುತ್ತೋಲೆಯನ್ನು ನಿ.ಎಂ.557(ಎ) ಎಂದು ಗುರುತಿಸಲಾಯಿತು.

ನಿ.ಎಂ.451 ರ ಪ್ರಕಾರ ನಮ್ಮ ಸಂಸ್ಥೆಯ ಎಂ.ಡಿ.ರವರು ವಿಕೃತಮಾಲಾ ಗ್ರಾಮದ ಕಾರ್ಖಾನೆಗೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಿನಾಂಕ 28.08.2020 ರಂದು ನಮ್ಮ ವಿಕೃತಮಾಲಾ ಘಟಕದ ಕಾರ್ಮಿಕರನ್ನು ಮೈಸೂರಿನಲ್ಲಿ ಬಂದು ಎಂ.ಡಿ. ಹಾಗೂ ಇತರರನ್ನು ಭೇಟಿ ಮಾಡಬೇಕು ಎಂದು ನಾವು ತಿಳಿಸಿದ್ದೆವು ಎಂದರೆ ಸರಿಯಲ್ಲ. ವಿಕೃತಮಾಲಾ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ಕೆಲಸವನ್ನು ಬಿಟ್ಟುಬಿಡಿ ಎಂದು ಹೇಳಿ, ಹಾಗೂ ಮೈಸೂರಿನಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲ ಎಂದು ಹೇಳಿ ನಾವು ಅವರನ್ನು ಬಲವಂತ ಪಡಿಸಲು ಸಭೆಯನ್ನು ಕರೆದಿದ್ದೆವು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಕಾರ್ಮಿಕರು ನಮ್ಮ ಒತ್ತಡಕ್ಕೆ ಒಳಗಾಗದಿದ್ದ ಕಾರಣ ವಿ.ಎಸ್.ಎಸ್. ತೆಗೆದುಕೊಳ್ಳಲು ನಾವು ಒತ್ತಾಯಪಡಿಸಿದ್ದೆವು ಎಂದರೆ ಸರಿಯಲ್ಲ. 2019 ರಿಂದ ಮಾರ್ಚ 2020 ರವರೆಗೆ ವಿಕೃತ ಮಾಲಾ ಘಟಕದಲ್ಲಿ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಹೊರತುಪಡಿಸಿ ಸ್ಥಳೀಯ

ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿದ್ದೀರಿ ಎಂದರೆ ನನಗೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ಆ ರೀತಿ ನಾವು ಯಾವುದೇ ಸ್ಥಳೀಯ ಕಾರ್ಮಿಕರನ್ನು ಕೆಲಸಕ್ಕೆ ನೇಮಕ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ವಿಕೃತಮಾಲಾ ಘಟಕದಲ್ಲಿ ಉತ್ಪಾದನೆಗೆ ಸಂಬಂಧಪಟ್ಟಂತೆ ನೀಡಿದ್ದ ಆದೇಶದ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇಲ್ಲ ಎಂದು ಉತ್ತರಿಸಿರುತ್ತಾರೆ. ದಿನಾಂಕ 31.03.2019 ರಿಂದ 31.03.2020 ರವರೆಗೆ ವಿಕೃತ ಮಾಲಾದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ವೇತನ ಸಹಿತ ರಜೆ ನೀಡುತ್ತೇವೆ ಎಂದು ನಾವು ತಿಳಿಸಿಲ್ಲ ಆದರೆ ಲಾಕ್‌ಡೌನ್ ಆಗಿದ್ದರ ಬಗ್ಗೆ ನಾವು ತಿಳಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಿ.ಎಂ.459 ರ ಪ್ರಕಾರ ಕಾರ್ಮಿಕರಿಗೆ ವೇತನ ಸಹಿತ ರಜೆ ನೀಡುವುದಾಗಿ ಕಾರ್ಮಿಕರಿಗೆ ತಿಳಿಸಿದ್ದೆವು ಎಂದರೆ ಸಾಕ್ಷಿ ಆಂಧ್ರಪ್ರದೇಶ ಸರ್ಕಾರದ COVID-19 ನಿಯಮಗಳನ್ನು ಪಾಲನೆ ಮಾಡಿರುತ್ತೇವೆ ಎಂದು ಹೇಳಿರುತ್ತಾರೆ. ಅಲ್ಲಿ ಕೆಲಸ ಮಾಡಿದ್ದ ಕಾರ್ಮಿಕರಿಗೆ ನಮ್ಮ ಎಂ.ಡಿ.ರವರು ರೂ.10,000/-ಗಳನ್ನು ಎಲ್ಲ ಕಾರ್ಮಿಕರುಗಳಿಗೂ ಮೈಸೂರು ತಲುಪುವುದಕ್ಕೆ ನೀಡಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸಿರುತ್ತಾರೆ. ತದನಂತರ ಎಲ್ಲ ಕಾರ್ಮಿಕರು ಬಂದು ಮೈಸೂರಿನಲ್ಲಿ ಕೆಲಸ ಮಾಡಲು ವಿಶೇಷ ಅನುಮತಿ ಪಡೆದುಕೊಂಡಿದ್ದರಿಂದ ಕೆಲಸ ಮಾಡಲು ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡಿದ್ದರು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

ಸದರಿ ಕಾರ್ಮಿಕರುಗಳಿಗೆ ಮಾರ್ಚ, ಏಪ್ರಿಲ್ ಹಾಗೂ ಮೇ-2020 ರ ವೇತನವನ್ನು ಪಾವತಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಸದರಿ ತಿಂಗಳುಗಳ ಕಾರ್ಮಿಕರ ವೇತನವನ್ನು ಯಾವ ದಿನಾಂಕದಂದು ನಾವು ಪಾವತಿ ಮಾಡಿದ್ದೆವು ಎನ್ನುವುದರ ಬಗ್ಗೆ ನನಗೆ ನೆನಪಿಲ್ಲ. ವೇತನವನ್ನು ಪಾವತಿ ಮಾಡಿದ ಬಗ್ಗೆ ನಮ್ಮ ಸಂಸ್ಥೆಯಲ್ಲಿರುವ ದಾಖಲೆಗಳನ್ನು ನೋಡಿ ಹೇಳಲು ತೊಂದರೆ ಇರುತ್ತದೆಯೇ ಎಂದರೆ ನೆನಪಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ವೇತನವನ್ನು

ಪಾವತಿ ಮಾಡುವುದಕ್ಕೆ ಸಂಬಂಧಪಟ್ಟಂತೆ ಕಾರ್ಮಿಕರು ನಮ್ಮ ಸಂಸ್ಥೆಗೆ ಒಂದು ಮನವಿಯನ್ನು ಸಹ ಕೊಟ್ಟಿದ್ದರು ಎಂದರೆ ನನಗೆ ನೆನಪಿಲ್ಲ. ಕಾರ್ಮಿಕರು ನಮಗೆ ಸಂಬಳ ನೀಡಲು ಕೇಳಿದಾಗ ನಾವು ಅದೇ ಕಾರಣವನ್ನು ಇಟ್ಟುಕೊಂಡು ಅವರನ್ನು ಕೆಲಸದಿಂದ ವಜಾ ಮಾಡಿದ್ದೇವೆ ಎಂದು ಅವರಿಗೆ ಹೇಳಿ ಅವರ ಖಾತೆಗಳಿಗೆ ಹಣವನ್ನು ಜಮಾ ಮಾಡಿರುತ್ತೇವೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರೆದು ನಾವು ಅವರನ್ನು ಕೆಲಸದಿಂದ ವಜಾ ಮಾಡಿಲ್ಲ, ಅದರೆ ನಮ್ಮ ಘಟಕವನ್ನು ಮುಕ್ತಾಯಗೊಳಿಸಿ ಅವರಿಗೆ ಪರಿಹಾರ ನೀಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಾವು ಅವರುಗಳನ್ನು ಕೆಲಸದಿಂದ ತೆಗೆಯುವ ಸಂದರ್ಭದಲ್ಲಿ ವಿವಾದ ಸಂಖ್ಯೆ Ref.CR 64/2018-19 ಬಾಕಿ ಇತ್ತು ಎಂದರೆ ಸಾಕ್ಷಿ ಅದು ಬೇರೆ ವಿಷಯ ಹಾಗೂ ಇದೇ ಬೇರೆ ವಿಷಯಕ್ಕೆ ಸಂಬಂಧಪಟ್ಟಂತೆ ಇರುತ್ತದೆ ಎಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ವಿವಾದ ಬಾಕಿಯಿದ್ದ ಕಾರಣದಿಂದ ಅನುಮೋದನೆಗೆ ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ಅದೇ ಬೇರೆ ವಿಷಯ ಆಗಿತ್ತು ಇದೇ ಬೇರೆ ವಿಷಯ ಇರುತ್ತದೆ ಎಂದು ಹೇಳಿರುತ್ತಾರೆ. ನಾವು ಕೆಲಸದಿಂದ ತೆಗೆಯುವ ಸಂಧರ್ಭದಲ್ಲಿ ಆಂಧ್ರ ಪ್ರದೇಶದಲ್ಲಿ ಯಾವುದೇ ವಿವಾದಗಳು ಇಲ್ಲದೇ ಇದ್ದುದ್ದರಿಂದ ಅಲ್ಲಿದ್ದ ಕಾರ್ಮಿಕ ಇಲಾಖೆ ಅಥವಾ ನ್ಯಾಯಾಲಯದಲ್ಲಿ ಅನುಮೋದನೆಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಾವು ಆಂಧ್ರ ಪ್ರದೇಶದ ನಿಯಮಾವಳಿಗಳ ಪ್ರಕಾರ ನಾವು ಘಟಕದ ಮುಕ್ತಾಯ ಹಾಗೂ ರಿಟ್ರೆಂಚ್ ಮಾಡಿರುತ್ತೇವೆ ಎಂದು ಹೇಳಿರುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅಧಿವೇಶನ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು).

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**

**<u>ಮದ್ಯಾಹ್ನ 3 ಗಂಟೆಗೆ ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ ಎಲ್.ಎಂ.ಪಿ. ವಕೀಲರಿಂದಃ**

ನಿ.ಎಂ.460 ರಂತೆ ನೊಟೀಸನ್ನು ಎಷ್ಟು ಜನ ಕಾರ್ಮಿಕರಿಗೆ ಕಳುಹಿಸಿದ್ದೀರಿ ಎಂದರೆ ಸಾಕ್ಷಿ 45 ಜನ ಕಾರ್ಮಿಕರಿಗೆ ಕಳುಹಿಸಿದ್ದೆವು ಎನ್ನುತ್ತಾರೆ. ವಿಕೃತಮಾಲಾ ಘಟಕದಲ್ಲಿ ಕೇವಲ 45 ಜನ ಕಾರ್ಮಿಕರು ಮಾತ್ರ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಆ ದಿನಾಂಕದಂದು 45 ಜನ ಕಾರ್ಮಿಕರು ಮಾತ್ರ ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. ಅದಕ್ಕಿಂತ ಮುಂಚೆ ಎಷ್ಟು ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದು ನನಗೆ ನೆನಪಿಲ್ಲ. ದಿನಾಂಕ 01.06.2019 ರಿಂದ 31.05.2020 ರವರೆಗೆ ಎಷ್ಟು ಜನ ಕಾರ್ಮಿಕರು ಸದರಿ ಘಟಕದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ನಾವು ಆಂಧ್ರಪ್ರದೇಶದ ಎ.ಪಿ.ಐ.ಐ.ಸಿ. ಯವರೊಂದಿಗೆ ಮಾಡಿಕೊಂಡ ಒಡಂಬಡಿಕೆ ಪ್ರಕಾರ ನಾವು ಸ್ಥಳೀಯರನ್ನು ಕೆಲಸಕ್ಕೆ ನೇಮಕ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಎಷ್ಟು ಜನ ಸ್ಥಳೀಯರನ್ನು ಕೆಲಸಕ್ಕೆ ತೆಗೆದುಕೊಂಡಿದ್ದೆವು ಎಂದು ನನಗೆ ಈಗ ನೆನಪಿಲ್ಲ. ಆ ರೀತಿ ಸ್ಥಳೀಯ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿದ್ದ ಬಗ್ಗೆ ದಾಖಲೆಗಳಲ್ಲಿ ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಈ ಪ್ರಕರಣಕ್ಕೆ ಅದು ಅವಶ್ಯಕತೆ ಇರಲಿಲ್ಲ ಎಂದು ಹೇಳುತ್ತಾರೆ.

ನಾವು ಎ.ಪಿ.ಐ.ಐ.ಸಿ.ರವರಿಗೆ ಸ್ಥಳೀಯರಿಗೆ ತುಂಬಾ ಚೆನ್ನಾಗಿ ತರಬೇತಿಯನ್ನು ನೀಡಿ ಕೆಲಸಕ್ಕೆ ತೆಗೆದುಕೊಂಡು ಬರುತ್ತೇವೆ ಎಂದು ಹೇಳಿ ಆಶ್ವಾಸನೆ ನೀಡಿದ್ದೆವು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. 3 ಫೇಸ್ ವಿದ್ಯುಚ್ಛಕ್ತಿಯನ್ನು ನಮ್ಮ ವಿಕೃತಮಾಲಾ ಘಟಕಕ್ಕೆ ಕೊಟ್ಟೆ ಇಲ್ಲ ಎಂದು ಹೇಳಿ ನಾವು ಎ.ಪಿ.ಐ.ಐ.ಸಿ.ರವರಿಗೆ ಪತ್ರ ಬರೆದು ತಿಳಿಸಿದ್ದೆವು ಎಂದರೆ ಸಾಕ್ಷಿ ಅವರ ನೊಟೀಸ್ ಗೆ ನಾವು ಉತ್ತರ ಕೊಟ್ಟಿದ್ದೆವು ಎಂದು ಹೇಳಿರುತ್ತಾರೆ. ಸದರಿ ಉತ್ತರ ಕೊಟ್ಟ ನೊಟೀಸ್ ನಲ್ಲಿ ನಮಗೆ ಸಿಂಗಲ್ ಫೇಸ್ ಮಾತ್ರ ವಿದ್ಯುಚ್ಛಕ್ತಿ ಕೊಟ್ಟಿರುತ್ತೀರಿ 3 ಫೇಸ್ ವಿದ್ಯುಚ್ಛಕ್ತಿಯನ್ನು ಕೊಟ್ಟೆ

ಇಲ್ಲ ಎಂದು ತಿಳಿಸಿರುತ್ತೇವೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರೆದು ಸೆಪ್ಟೆಂಬರ್ 2018 ರಲ್ಲಿ ಆ ರೀತಿ ಸಮಸ್ಯೆ ಉದ್ಭವವಾಗಿತ್ತು ಎಂದು ಹೇಳಿರುತ್ತಾರೆ.

ದಿನಾಂಕ 07.01.2019 ರ ಒಡಂಬಡಿಕೆಯನ್ನು ಉಲ್ಲಂಘನೆ ಮಾಡಿ ನಾವು ಕಾರ್ಮಿಕರನ್ನು ಕೆಲಸದಿಂದ ತೆಗೆದಿರುತ್ತೇವೆ ಎಂದರೆ ಸರಿಯಲ್ಲ. ಕೊವೀಡ್ ಕಾರಣದಿಂದ ಕಾರ್ಖಾನೆಯನ್ನು ಮುಚ್ಚುತ್ತಿದ್ದೇವೆ ಎಂದು ಎ.ಪಿ.ಐ.ಐ.ಸಿ.ರವರಿಗೆ ಒಂದು ಪತ್ರವನ್ನು ಬರೆದಿದ್ದೆವು ಎಂದರೆ ನಾನು ಸದರಿ ದಾಖಲೆಯನ್ನು ನೋಡಿಲ್ಲ ಹಾಗೂ ಅದರಲ್ಲಿ ಬರೆದಿರುವ ವಿಚಾರಗಳು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. 2016-17, 2017-18 ನೇ ಸಾಲುಗಳಲ್ಲಿ ನಮ್ಮ ಕಾರ್ಖಾನೆ ಲಾಭಾದಾಯಕವಾಗಿ ನಡೆಯುತ್ತಿತ್ತು ಎಂದರೆ ನನಗೆ ನೆನಪಿಲ್ಲ. 2018 ರಲ್ಲಿ ಮೈಸೂರು ಘಟಕದಲ್ಲಿ ಕೆಲಸ ಮಾಡುತ್ತಿದ್ದ ಬಹುತೇಕ ಕಾರ್ಮಿಕರು ಸಂಘದಲ್ಲಿ ಸದಸ್ಯರಾಗಿ ಸಾಕಷ್ಟು ವಿವಾದಗಳು ಎದ್ದಿದ್ದರಿಂದ ಸಂಘವನ್ನು ಮುರಿಯಲು ಸಂಘದ ಸದಸ್ಯರುಗಳನ್ನು ನೆಪಗೊಳಿಸಿ ತಿರುಪತಿಗೆ ವರ್ಗಾವಣೆ ಮಾಡಿದರೆ ಅವರು ಅಲ್ಲಿಗೆ ಹೋಗಿ ವರದಿ ಮಾಡಿಕೊಳ್ಳುವುದಿಲ್ಲ, ಕೆಲಸವನ್ನು ಬಿಟ್ಟು ಹೋಗುತ್ತಾರೆ ಎಂದು ಭಾವಿಸಿ ಅವರನ್ನು ತಿರುಪತಿಗೆ ವರ್ಗಾವಣೆ ಮಾಡಿದ್ದೆವು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಯಾವಾಗ ಕುಂತತ್ರಗಳು ವಿಫಲವಾಗಿತ್ತೋ ಕಾರ್ಮಿಕರನ್ನು ಬಲೀಪಶು ಮಾಡುವ ನಿಟ್ಟಿನಲ್ಲಿ ಆ ಕಾರ್ಖಾನೆಯನ್ನು ಮುಚ್ಚಿ ಅವರನ್ನು ಕೆಲಸದಿಂದ ಕಾನೂನು ಬಾಹಿರವಾಗಿ ತೆಗೆದು ಹಾಕಿದ್ದೆವು ಎಂದರೆ ಸರಿಯಲ್ಲ. ಇವತ್ತಿನವರೆಗೂ ಆಂಧ್ರಪ್ರದೇಶದಲ್ಲಿ ಈ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಾಗಲೀ, ಕಾರ್ಮಿಕ ಇಲಾಖೆಯಲ್ಲಿ ವಿವಾದಗಳು ಬಾಕಿ ಇರುವುದಿಲ್ಲ ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಒಂದು ವೇಳೆ ಆ ರೀತಿ ವಿವಾದಗಳು ಬಾಕಿ ಇದ್ದರೆ ನಮಗೆ ನೊಟೀಸ್ ಬರುತ್ತಿತ್ತು, ನಾವು ಅಲ್ಲಿಗೆ ಹಾಜರಾಗುತ್ತಿದ್ದೆವು ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಆಂಧ್ರಪ್ರದೇಶದಲ್ಲಿರುವ ಹಲವಾರು

ಪ್ರಾಧೀಕಾರಗಳಲ್ಲಿ ಮೈಸೂರು ಪ್ರಿನ್ಸಿಪಲ್ ಪ್ಲೇಸ್ ಆಫ ಎಂಪ್ಲಾಯಮೆಂಟ್ ಎಂದು ಹೇಳಿ ಮಾಹಿತಿಯನ್ನು ನಾವು ನೀಡಿದ್ದೆವು ಎಂದರೆ ಸರಿಯಲ್ಲ. ತಿರುಪತಿಯಲ್ಲಿದ್ದ ಕಾರ್ಖಾನೆ ಘಟಕವನ್ನು ಮುಚ್ಚಿದ ನಂತರ ಮೈಸೂರಿನಲ್ಲಿದ್ದ ನಮ್ಮ ಘಟಕದಲ್ಲಿ ಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಅದೇ ಬೇರೆ ವಿಷಯವಾಗಿತ್ತು ಇದೇ ಬೇರೆ ವಿಷಯವಾಗಿತ್ತು ಎಂದು ಹೇಳುತ್ತಾರೆ.

ದಿನಾಂಕ 01.06.2020ರ ನಂತರ ಇಲ್ಲಿಯವರಗೂ ಹಲವಾರು ಕಾರ್ಮಿಕರನ್ನು ನಾವು ಕೆಲಸಕ್ಕೆ ತೆಗೆದುಕೊಂಡಿದ್ದೆವೆ ಎಂದರೆ ಸರಿಯಲ್ಲ. ತಿರುಪತಿಯಲ್ಲಿ ಪ್ರಾರಂಭಿಸಿದ ಘಟಕ ಹಾಗೂ ಮೈಸೂರಿನಲ್ಲಿ ನಡೆಯುತ್ತಿದ್ದ ಘಟಕಕ್ಕೆ ಮ್ಯಾನೇಜಮೆಂಟ್ ಒಂದೇ ಇತ್ತು ಎಂದರೆ ಸರಿ ಎಂದು ಉತ್ತರಿಸಿರುತ್ತಾರೆ. ತಿರುಪತಿಯಲ್ಲಿ ನಡೆದಿದ್ದ ಸಂಧಾನ ಸಭೆ ಹಾಗೂ ಬೆಂಗಳೂರಿನಲ್ಲಿ ನಡೆಯುತ್ತಿದ ಸಂಧಾನ ಸಭೆಯಲ್ಲಿ ನಾನೇ ಖುದ್ದಾಗಿ ಹಾಜರಾಗುತ್ತಿದ್ದೆ ಎಂದರೆ ಸಾಕ್ಷಿ ನನಗೆ ಅಧಿಕಾರ ಪತ್ರ ನೀಡಿದ್ದರಿಂದ ನಾನು ಹೋಗಿದ್ದೆ ಎಂದು ಹೇಳುತ್ತಾರೆ. ಸದರಿ 45 ಜನ ಕಾರ್ಮಿಕರನ್ನು ನಾವು ಅನ್ಯಾಯವಾಗಿ ಹಾಗೂ ಕಾನೂನು ಬಾಹಿರವಾಗಿ ದಿನಾಂಕ 07.01.2019ರ ಒಡಂಬಡಿಕೆಗೆ ವಿರುದ್ಧವಾಗಿ ಕೆಲಸದಿಂದ ತೆಗೆದುಹಾಕಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದೇ ಬೇರೆ ವಿಚಾರ ಹಾಗೂ ಇದೇ ಬೇರೆ ವಿಚಾರ ಎಂದು ಹೇಳುತ್ತಾರೆ. ನಾವು ಕಾರ್ಮಿಕರ ಖಾತೆಗೆ ಹಣ ಸಂದಾಯ ಮಾಡಿದ ನಂತರ ನಮ್ಮನ್ನು ಕೆಲಸದಿಂದ ತೆಗೆದು ಹಾಕಿರುವುದಾಗಿ ಮಾಹಿತಿ ಬರುತ್ತಿದೆ, ಆ ರೀತಿ ಮಾಡಬೇಡಿ ಎಂದು ಹೇಳಿ, ಒಂದು ವೇಳೆ ಆ ರೀತಿ ಮಾಡಿದ್ದರೆ ತೆಗೆದು ಹಾಕಿದ್ದ ಆದೇಶವನ್ನು ಹಿಂಪಡೆದುಕೊಳ್ಳಿ ಎಂದು ಪತ್ರ ಬರೆದು ಹಾಗೂ ವಾಟ್ಸಪ್ನಲ್ಲಿ ಸಂದೇಶ ಕಳುಹಿಸಿ ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಕಾರ್ಮಿಕರ ಖಾತೆಗೆ ಜಮಾ ಮಾಡಿದ್ದ ಹಣವನ್ನು, ಅವರಿಗೆ ಸೇರಬೇಕಾಗಿದ್ದ ಬಾಕಿ ವೇತನ ಎಂದು ಪರಿಗಣಿಸಿ ಅವರ ಜೀವನ ನಿರ್ವಹಣೆಗಾಗಿ ತಮ್ಮ ಹಕ್ಕನ್ನು ಕಾಯ್ದಿರಿಸಿ ಯಾವುದೇಲ ಪೂರ್ವಗ್ರಹ

ಪೀಡಿತರಲ್ಲದೇ ಹಣವನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ ಎಂದು ಪತ್ರವನ್ನು ಬರೆದಿದ್ದರು ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಈ ನ್ಯಾಯಾಲಯದಲ್ಲಿ ಸಲ್ಲಿಸಿರುವ ಹಲವಾರು ದಾಖಲೆಗಳನ್ನು ಸೃಷ್ಟಿ ಮಾಡಿ, ನ್ಯಾಯಾಲಯದ ದಿಕ್ಕು ತಪ್ಪಿಸುವ ಸಲುವಾಗಿ ಹಾಜರುಪಡಿಸಿರುತ್ತೇವೆ ಎಂದರೆ ಸುಳ್ಳು. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಂಧಾನವನ್ನು ಮುಕ್ತಾಯಗೊಳಿಸಲು ದಿನಾಂಕ 28.08.2020 ರಂದು ಡಿ.ಎಲ್.ಸಿ.ರವರಿಗೆ ಪತ್ರವನ್ನು ಬರೆದು ತಿಳಿಸಿದ್ದೆನು ಎಂದರೆ ಸಾಕ್ಷಿ ಸಂಧಾನ ಸಭೆಯಲ್ಲಿ ಸುತ್ತೋಲೆಯನ್ನು ಸೇರಿಸಿ ನಾವು ಉತ್ತರವನ್ನು ಕೊಟ್ಟಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಸದರಿ ಮೆಮೋ ಹಾಗೂ ಸರ್ಕಾರದ ಸುತ್ತೋಲೆಯನ್ನು ನಿ.ಎಂ.558 ಹಾಗೂ 558(ಎ) ಎಂದು ಗುರುತಿಸಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**